**<u>ದಿ:29.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟೀ ಸವಾಲು: 2ನೇ ಪ್ರತಿವಾದಿ ಪರ ವಕೀಲರಿಂದ:</u>**

1. ನಿಪಿ 67 ದಾಖಲೆಗೆ ಅಕ್ಟೋಬರ್ 2006 ರಂದು ಸಹಿ ಮಾಡಿರುತ್ತೇನೆ ಯಾವ ದಿನದಂದು ಸಹಿ ಮಾಡಿರುತ್ತೇನೆ ಎಂದು ಹೇಳಲು ನೆನಪಿಲ್ಲ. ನಿಪಿ 67 ದಾಖಲೆಗೆ ನಾನು ಒಂದು ಸಹಿ ಮಾಡಿರುತ್ತೇನೆ. ನಿಪಿ 67 ದಾಖಲೆಗೆ ಅಬ್ದುಲ್ ಎಂಬುವವರು ಕೂಡ ಸಹಿ ಮಾಡಿರುತ್ತಾರೆ. ಸದರಿಯವರು ಎಷ್ಟು ಸಹಿ ಮಾಡಿರುತ್ತಾರೆ ಎಂದು ಹೇಳಲು ನೆನಪಿಲ್ಲ. ನಿಪಿ 67 ದಾಖಲೆಯನ್ನು ಎಷ್ಟು ಮೊತ್ತದ ಮುಖಬೆಲೆಯ ಚಾಪಾ ಕಾಗದದಲ್ಲಿ ಮಾಡಲಾಗಿರುತ್ತದೆ ಎಂದು ಹೇಳಲು ನನಗೆ ನೆನಪಿಲ್ಲ. ಅದೇ ರೀತಿ ಸದರಿ ದಾಖಲೆ ಎಷ್ಟು ಪುಟದಿಂದ ಕೂಡಿರುತ್ತದೆ ಎಂದು ಹೇಳಲು ನೆನಪಿಲ್ಲ. ನನಗೆ ತಿಳಿದ ಪ್ರಕಾರ ನಿಪಿ 67 ಕ್ರಯ ಪತ್ರವನ್ನು ನನ್ನ ಅಳಿಯನಾದ 4ನೇ ವಾದಿ ಮಾಡಿಕೊಂಡಿರುವಂತಹ ದಾಖಲೆಯಾಗಿರುತ್ತದೆ. ಯಾವ ಯಾವ ಸರ್ವೆ ನಂಬರ್ ಮತ್ತು ಅದರ ವಿಸ್ತೀರ್ಣ ಎಷ್ಟು ಎಂದು ಹೇಳಲು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರ ಮನೆ ಮತ್ತು ಸುತ್ತಮುತ್ತಲಿನ ಜಾಗಕ್ಕೆ ಸಂಬಂಧಿಸಿದ ಕ್ರಯ ಪತ್ರ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿ ಮಡಿಕೇರಿಯ ಗದ್ದಿಗೆ ತ್ಯಾಗರಾಜ ಕಾಲೋನಿಯಲ್ಲಿ ಇದೆ. ನಿಪಿ 67 ದಾಖಲೆಯ ಪ್ರಕಾರ ಒಟ್ಟು ಎಷ್ಟು ಐಟಂ ಆಸ್ತಿಗಳಿಗೆ ಸಂಬಂಧಿಸಿದ ಕ್ರಯ ಪತ್ರ ಮಾಡಿಕೊಂಡಿರುತ್ತಾರೆ ಎಂದು ಹೇಳಲು ನನಗೆ ಗೊತ್ತಿಲ್ಲ.

2. ನಿಪಿ 67 ದಾಖಲೆಗೆ ನಾನು 4ನೇ ವಾದಿಯವರ ಮನೆಯಲ್ಲಿಯೇ ಸಹಿ ಮಾಡಿರುತ್ತೇನೆ. ಸದರಿ ದಾಖಲೆ ಕನ್ನಡ ಭಾಷೆಯಲ್ಲಿ ಇದೆ. ಸದರಿ ದಾಖಲೆಯನ್ನು ಕೈಯಲ್ಲಿ ಬರೆದಿರುವಂತಹ ದಾಖಲೆ ಆಗಿರುತ್ತದೆ. ಸದರಿ ದಾಖಲೆಯ ಪ್ರಕಾರ ಅಣ್ಣ ತಮ್ಮಂದಿರ ಪಾಲು ಆಗಿರುತ್ತದೆ. ಅಣ್ಣ ತಮ್ಮಂದಿರು ಎಂದರೆ 1ನೇ ಪ್ರತಿವಾದಿ ,

1 ರಿಂದ 3 ನೇ ವಾದಿಯವರು ಆಗಿರುತ್ತಾರೆ. ದಾಖಲೆಯಾಗುವ ಸಮಯದಲ್ಲಿ ಅವರೆಲ್ಲರೂ ಇದ್ದರು. ಸದರಿ ಅಣ್ಣ ತಮ್ಮಂದಿರು ದಾಖಲೆಗೆ ಸಹಿ ಮಾಡಿದ ನಂತರದಲ್ಲಿ ನಾನು ಸಹಿ ಮಾಡಿರುತ್ತೇನೆ.

3. ನಾನು 4 ನೇ ವಾದಿಗೆ 8 ಲಕ್ಷ ಹಣವನ್ನು ನೀಡಿರುತ್ತೇನೆ. ಅದೇ ರೀತಿ ಅಬ್ದುಲ್ ಎಂಬುವವರು 4 ನೇ ವಾದಿಗೆ 2 ಲಕ್ಷ ಹಣವನ್ನು ನೀಡಿರುತ್ತಾರೆ. ನಾನು ಮತ್ತು ಅಬ್ದುಲ್ ರವರು 4 ನೇ ವಾದಿಗೆ ಹಣವನ್ನು ನಗದಾಗಿ ಕೊಟ್ಟಿರುತ್ತೇವೆ. ಕರಾರು ಆದ ಮರುದಿನ ನಾನು ಮತ್ತು ಅಬ್ದುಲ್ ರವರು 4 ನೇ ವಾದಿಗೆ ಹಣವನ್ನು ನೀಡಿರುತ್ತೇವೆ. ನಾನು ಮತ್ತು ಅಬ್ದುಲ್ ರವರು 4 ನೇ ವಾದಿಯವರಿಗೆ ಹಣವನ್ನು ನೀಡಿದ ಬಗ್ಗೆ ಕರಾರಿನಲ್ಲಿ ತಿಳಿಸಿರುವುದಿಲ್ಲ. ನಾನು ನನ್ನ ಮಗಳ ಚಿನ್ನವನ್ನು ಮಾರಿ ಹಣವನ್ನು ತೆಗೆದುಕೊಂಡು ಹೋಗಿ 4 ನೇ ವಾದಿಗೆ ಕೊಟ್ಟಿರುತ್ತೇನೆ. ಚಿನ್ನವನ್ನು ಮಾರಾಟ ಮಾಡಿದ ಬಗ್ಗೆ ರಶೀದಿ ಎಲ್ಲಿ ಇದೆ ಎಂದು ನೆನಪಿಲ್ಲ. ಯಾವ ಅಂಗಡಿಗೆ ಎಷ್ಟು ಮೊತ್ತಕ್ಕೆ ಮತ್ತು ಎಷ್ಟು ಗ್ರಾಂ ಚಿನ್ನವನ್ನು ಮಾರಾಟ ಮಾಡಿರುತ್ತೇನೆ ಎಂದು ಹೇಳಲು ನೆನಪಿಲ್ಲ. ನನ್ನ ಮಗಳಿಗೆ ಮದುವೆಯ ಸಮಯದಲ್ಲಿ ನಾನು ಕೊಟ್ಟಂತಹ ಚಿನ್ನವನ್ನು ಪುನಃ ತೆಗೆದುಕೊಂಡು ಮಾರಾಟ ಮಾಡಿ ಹಣವನ್ನು ಕೊಟ್ಟಿರುತ್ತೇನೆ. ನನ್ನ ಮಗಳು ಎಂದರೆ 4 ನೇ ವಾದಿಯ ಹೆಂಡತಿ . ನನ್ನ ಮಗಳು ಮತ್ತು 4 ನೇ ವಾದಿ ಒಂದೇ ಮನೆಯಲ್ಲಿ ವಾಸಿಸುತ್ತಿದ್ದಾರೆ. ಅವರಿಬ್ಬರ ನಡುವೆ ಸಂಬಂಧ ಚೆನ್ನಾಗಿ ಇದೆ. ನಾನು ಹೇಳಿದಂತಹ ಚಿನ್ನವನ್ನು 2004 ರಲ್ಲಿ ಮದುವೆಯ ಸಮಯದಲ್ಲಿ ಕೊಟ್ಟಿರುತ್ತೇನೆ. ಪುನಃ 2006 ರಲ್ಲಿ ನನ್ನ ಮಗಳಿಂದ ಚಿನ್ನವನ್ನು ಪಡೆದುಕೊಂಡಿರುತ್ತೇನೆ. ನನ್ನ ಪ್ರಕಾರ ನನ್ನ ಮಗಳಿಗೆ ನಾನು ಕೊಟ್ಟಂತಹ ಚಿನ್ನವನ್ನು ಪುನಃ ತೆಗೆದುಕೊಂಡು ಮಾರಾಟ ಮಾಡಿ ಅದರಲ್ಲಿ ಬಂದಂತಹ ಹಣವನ್ನು ನಾನು 4 ನೇ ವಾದಿಯವರಿಗೆ ಕೊಟ್ಟಿರುತ್ತೇನೆ.

4. ಇಪ್ಪತ್ತೈದು ಲಕ್ಷ ರೂ. ಗೆ ಒಪ್ಪಂದ ಆಗಿದ್ದು, 10 ಲಕ್ಷ ರೂ.ಗಳನ್ನು ನಾನು ಮತ್ತು ಅಬ್ದುಲ್ ರವರು 4ನೇ ವಾದಿಯರಿಗೆ ಕೊಟ್ಟಿರುತ್ತೇವೆ. ಉಳಿದ 15 ಲಕ್ಷ ರೂ.ಗಳು 1 ರಿಂದ 3ನೇ ವಾದಿಯವರ ಪಾಲು ಆಗಿತ್ತು. ನಿಪಿ 67 ದಾಖಲೆಯನ್ನು ನಾನು ಓದಿರುವುದಿಲ್ಲ. ಅದರಲ್ಲಿ ಬರೆದಿರುವ ವಿಷಯದ ಬಗ್ಗೆ ನನಗೆ ಹೇಳಲು ನೆನಪಿಲ್ಲ. ನನಗೆ ಕನ್ನಡ ಓದಲು ಗೊತ್ತಿದೆ. ಇಂಗ್ಲೀಷ್ ಓದಲು ಬರುವುದಿಲ್ಲ. ನಾನು ಹೇಳುವಂತೆ 1ನೇ ಪ್ರತಿವಾದಿಯವರು 4ನೇ ವಾದಿಯವರಿಗೆ ನಿಪಿ 67 ದಾಖಲೆಯನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸುಳ್ಳು. ಅದೇ ರೀತಿ ನಿಪಿ 67 ದಾಖಲೆಯನ್ನು 25 ಲಕ್ಷ ರೂ.ಗಳಿಗೆ ಸಂಬಂಧಿಸಿದಂತೆ ಮಾಡಲಾಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 4ನೇ ವಾದಿ 1ನೇ ಪ್ರತಿವಾದಿಯವರಿಗೆ 10 ಲಕ್ಷ ರೂ.ಗಳನ್ನು ಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಯೆ ನುಡಿಯುತಿತದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ ಹಾಗೆ ನನ್ನ ಮಗಳ ಚಿನ್ನವನ್ನು ಮಾರಾಟ ಮಾಡಿ 4ನೇ ವಾದಿಯವರಿಗೇ 8 ಲಕ್ಷ ರೂ.ಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸುಳ್ಳು. ಅದೇ ರೀತಿ 2 ಲಕ್ಷ ರೂ.ಗಳನ್ನು ಅಬ್ದುಲ್ ರವರು ಕೊಟ್ಟಿರುವುದಿಲ್ಲ ಎಂದರೆ ಸುಳ್ಳು. ನಿಪಿ 67 ದಾಖಲೆಯನ್ನು 1ನೇ ವಾದಿಯವರ ಮನೆಯಲ್ಲಿ ಮಾಡಲಾಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 67 ದಾಖಲೆಯನ್ನು 1ನೇ ಪ್ರತಿವಾದಿಯವರು ಮನೆ ಮತ್ತು ಸುತ್ತಮುತ್ತಲಿನ ಜಾಗಕ್ಕೆ ಸಂಬಂಧಿಸಿದಂತೆ ಮಾಡಿಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 4ನೇ ವಾದಿ ನನ್ನ ಅಳಿಯ ಎಂಬ ಕಾರಣದಿಂದ ನ್ಯಾಯಾಲಯಂದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 67 ದಾಖಲೆ ನಾವು ಸೃಷ್ಠಿ ಮಾಡಿರುಂತಹ ದಾಖಲೆಯಾಗಿರುತ್ತದೆ ಎಂದರೆ ಸುಳ್ಳು. ನನ್ನ ಮುಖ್ಯ

ವಿಚಾರಣೆಯಲ್ಲಿ ತಿಳಿಸಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯವರು 4ನೇ ವಾದಿಯವರಿಗೆ ನಿಪಿ 67 ಅಥವಾ ಬೇರೆ ಯಾವುದೇ ದಾಖಲೆಯನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸುಳ್ಳು. 2ನೇ ಪ್ರತಿವಾದಿಯವರ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.

**ದಿ:29.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲು: 2 ನೇ ಪ್ರತಿವಾದಿ ಪರ ವಕೀಲರಿಂದ:**

1. ನಿಪಿ 67 ದಾಖಲೆಗೆ 2006 ರಲ್ಲಿ ಸಹಿ ಮಾಡಿರುತ್ತೇನೆ ಯಾವ ದಿನದಂದು ಮತ್ತು ತಿಂಗಳಲ್ಲಿ ಸಹಿ ಮಾಡಿರುತ್ತೇನೆ ಎಂದು ಹೇಳಲು ನೆನಪಿಲ್ಲ. ನಿಪಿ 67 ದಾಖಲೆಗೆ ನಾನು ಒಂದು ಸಹಿ ಮಾಡಿರುತ್ತೇನೆ. ನಿಪಿ 67 ದಾಖಲೆಗೆ ಮೊದಲಿಗೆ 1 ನೇ ಪ್ರತಿವಾದಿ, 4 ನೇ ವಾದಿ, ಸಾಧುಲಿ ಎಂಬುವವರು ಸಹಿ ಮಾಡಿದ ನಂತರದಲ್ಲಿ ನಾನು ಸಹಿ ಮಾಡಿರುತ್ತೇನೆ. ಸದರಿಯವರು ಎಷ್ಟು ಸಹಿ ಮಾಡಿರುತ್ತಾರೆ ಎಂದು ಹೇಳಲು ನೆನಪಿಲ್ಲ. ನಿಪಿ 67 ದಾಖಲೆಯನ್ನು ಎಷ್ಟು ಮೊತ್ತದ ಮುಖಬೆಲೆಯ ಚಾಪಾ ಕಾಗದದಲ್ಲಿ ಮಾಡಲಾಗಿರುತ್ತದೆ ಎಂದು ಹೇಳಲು ನನಗೆ ನೆನಪಿಲ್ಲ. ಅದೇ ರೀತಿ ಸದರಿ ದಾಖಲೆ ಎಷ್ಟು ಪುಟದಿಂದ ಕೂಡಿರುತ್ತದೆ ಎಂದು ಹೇಳಲು ನೆನಪಿಲ್ಲ. ನನಗೆ ತಿಳಿದ ಪ್ರಕಾರ ನಿಪಿ 67 ಕ್ರಯ ಪತ್ರವನ್ನು 1 ನೆಲೇ ಪ್ರತಿವಾದಿಯವರು 4 ನೇ ವಾದಿಗೆ ಮಾಡಿಕೊಟ್ಟಿರುವಂತಹ ದಾಖಲೆಯಾಗಿರುತ್ತದೆ. ಯಾವ ಯಾವ ಸರ್ವೆ ನಂಬರ್ ಮತ್ತು ಅದರ ವಿಸ್ತೀರ್ಣ ಎಷ್ಟು ಎಂದು ಹೇಳಲು ನನಗೆ ಗೊತ್ತಿಲ್ಲ. ನಿಪಿ 67 ದಾಖಲೆಯ ಪ್ರಕಾರ ಒಟ್ಟು ಎಷ್ಟು ಐಟಂ ಆಸ್ತಿಗಳಿಗೆ ಸಂಬಂಧಿಸಿದ ಕ್ರಯ ಪತ್ರ ಮಾಡಿಕೊಂಡಿರುತ್ತಾರೆ ಎಂದು ಹೇಳಲು ನನಗೆ ಗೊತ್ತಿಲ್ಲ.

2. ನಿಪಿ 67 ದಾಖಲೆಗೆ ನಾನು 4 ನೇ ವಾದಿಯವರ ಮನೆಯಲ್ಲಿಯೇ ಸಹಿ ಮಾಡಿರುತ್ತೇನೆ. ಸದರಿ ದಾಖಲೆ ಯಾವ ಭಾಷೆಯಲ್ಲಿ ಇದೆ ಎಂದು ನನಗೆ ಈಗ ಹೇಳಲು ಗೊತ್ತಿಲ್ಲ. ಸದರಿ ದಾಖಲೆಯನ್ನು ಕೈಯಲ್ಲಿ ಬರೆದಿರುವಂತಹ ದಾಖಲೆಯೋ ಅಥವಾ ಬೆರಳಚ್ಚು ಮಾಡಿರುವಂತಹ ದಾಖಲೆಯೋ ಎಂದು ಹೇಳಲು ನೆನಪಿಲ್ಲ. ದಾಖಲೆಯಾಗುವ ಸಮಯದಲ್ಲಿ 1 ರಿಂದ 3 ನೇ ವಾದಿಯವರು ಇದ್ದರು. ಸದರಿಯವರು ದಾಖಲೆಗೆ ಸಹಿ ಮಾಡಿರುತ್ತಾರೋ ಇಲ್ಲವೋ ಎಂದು ಹೇಳಲು ಅಷ್ಟು ನೆನಪಿಲ್ಲ.

3. ನಾನು 1 ನೇ ವಾದಿಗೆ 2 ಲಕ್ಷ ಹಣವನ್ನು ನೀಡಿರುತ್ತೇನೆ. ಅದೇ ರೀತಿ ಸಾಧುಲಿ ಎಂಬುವವರು 4 ನೇ ವಾದಿಗೆ 8 ಲಕ್ಷ ಹಣವನ್ನು ನೀಡಿರುತ್ತಾರೆ. ನಾನು 1 ನೇ ವಾದಿಗೆ ಹಣವನ್ನು ನಗದಾಗಿ ಕೊಟ್ಟಿರುತ್ತೇವೆ. ಸಾಧುಲಿಯವರು 4 ನೇ ವಾದಿಗೆ ಹಣವನ್ನು ನಗದಾಗಿ ಕೊಟ್ಟಿರುತ್ತಾರೆ ಅಥವಾ ಚೆಕ್ಕಿನ ಮುಖಂತಾರ

ಕೊಟ್ಟಿರುತ್ತಾರೋ ಎಂದು ಹೇಳಲು ಅಷ್ಟು ನೆನಪಿಲ್ಲ. ಕರಾರು ಆದ ಮರುದಿನ ನಾನು ಮತ್ತು ಸಾಧುಲಿ ರವರು ಹಣವನ್ನು ನೀಡಿರುತ್ತೇವೆ. ನಾನು ಮತ್ತು ಸಾಧುಲಿ ರವರು 1 ಮತ್ತು 4ನೇ ವಾದಿಯವರಿಗೆ ಹಣವನ್ನು ನೀಡಿದ ಬಗ್ಗೆ ಕರಾರಿನಲ್ಲಿ ತಿಳಿಸಿದ್ದಾರೋ ಇಲ್ಲವೋ ಎಂದು ಹೇಳಲು ನೆನಪಿಲ್ಲ. ನನ್ನ ದಿನಸಿ ಅಂಗಡಿ ವ್ಯಾಪಾರದಿಂದ ಬಂದಂತಹ ಹಣವನ್ನು ತೆಗೆದುಕೊಂಡು ಹೋಗಿ 1ನೇ ವಾದಿಗೆ ಕೊಟ್ಟಿರುತ್ತೇನೆ. ನಾನು ಪ್ರತಿದಿನ ವ್ಯಾಪಾರದಿಂದ ಬಂದಂತಹ ಹಣವನ್ನು ಇಟ್ಟಿದ್ದು ಅದನ್ನು ಕೊಟ್ಟಿರುತ್ತೇನೆ. ನನ್ನ ಅಂಗಡಿ 10 X 12 ಅಡಿ ಇರುತ್ತದೆ. 2 ಲಕ್ಷ ರೂ. ಎಂದರೆ ನಾನು ಸುಮಾರು ವರ್ಷದಿಂದ ಬಂದಂತಹ ಆದಾಯವನ್ನು ಜೋಡಿಸಿ ಇಟ್ಟಿದ್ದ ಹಣ ಆಗಿರುತ್ತದೆ. 2006ರಲ್ಲಿ ನ್ನ್ನ ಬಳಿ ಎರಡು ಲಕ್ಷ ರೂ. ಇದ್ದ ಬಗ್ಗೆ ತೋರಿಸಲು ದಾಖಲೆ ಇರುವುದಿಲ್ಲ, ಸಾಧುಲಿಯವರು ಅವರ ಮಗಳ ಚಿನ್ನವನ್ನು ಮಾರಾಟ ಮಾಡಿ ಹಣವನ್ನು ಕೊಟ್ಟಿರುತ್ತಾರೆ. ನನ್ನ ಅಂಗಡಿಗೆ ಸಂಬಂಧಿಸಿದಂತೆ ಪರವಾನಿಗೆ ಇದೆ. ನಾನು 10 ವರ್ಷಕ್ಕಿಂತ ಮೊದಲು ನನ್ನ ದಿನಸಿ ಅಂಗಡಿಯನ್ನು ಮುಚ್ಚಿರುತ್ತೇನೆ.

4. ಇಪ್ಪತ್ತೈದು ಲಕ್ಷ ರೂ. ಗೆ ಒಪ್ಪಂದ ಆಗಿದ್ದು, 10 ಲಕ್ಷ ರೂ.ಗಳನ್ನು ನಾನು ಮತ್ತು ಸಾಧುಲಿ ಯವರು ಕೊಟ್ಟಿರುತ್ತೇವೆ. ಉಳಿದ 15 ಲಕ್ಷ ರೂ.ಗಳನ್ನು ಯಾರು ಕೊಟ್ಟಿರುತ್ತಾರೆ ಎಂದು ಹೇಳಲು ನೆನಪಿಲ್ಲ. ನಿಪಿ 67 ದಾಖಲೆಯನ್ನು ನಾನು ಓದಿರುವುದಿಲ್ಲ. ಅದರಲ್ಲಿ ಬರೆದಿರುವ ವಿಷಯದ ಬಗ್ಗೆ ನನಗೆ ಹೇಳಲು ಗೊತ್ತಿಲ್ಲ. ನನಗೆ ಕನ್ನಡ ಮತ್ತು ಇಂಗ್ಲಿಷ್ ಓದಲು ಬರುವುದಿಲ್ಲ. ನಾನು ಹೇಳುವಂತೆ 1ನೇ ಪ್ರತಿವಾದಿಯವರು 4ನೇ ವಾದಿಯವರಿಗೆ ನಿಪಿ 67 ದಾಖಲೆಯನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸುಳ್ಳು. ಅದೇ ರೀತಿ ನಿಪಿ 67 ದಾಖಲೆಯನ್ನು 25 ಲಕ್ಷ ರೂ.ಗಳಿಗೆ ಸಂಬಂಧಿಸಿದಂತೆ ಮಾಡಲಾಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 4ನೇ ವಾದಿ 1ನೇ ಪ್ರತಿವಾದಿಯವರಿಗೆ 10 ಲಕ್ಷ ರೂ.ಗಳನ್ನು ಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ ಹಾಗೆ ಸಾಧುಲಿಯವರು 4ನೇ ವಾದಿಯವರಿಗೆ 8 ಲಕ್ಷ ರೂ.ಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸುಳ್ಳು. ಅದೇ ರೀತಿ 2 ಲಕ್ಷ ರೂ.ಗಳನ್ನು ನಾನು 1ನೇ ವಾದಿಗೆ ಕೊಟ್ಟಿರುವುದಿಲ್ಲ ಎಂದರೆ ಸುಳ್ಳು. ನಿಪಿ 67 ದಾಖಲೆಗೆ 1ನೇ ವಾದಿಯವರ ಮನೆಯಲ್ಲಿ ಸಹಿ ಮಾಡಿರುತ್ತೇನೆ. 4ನೇ ವಾದಿ ನನ್ನ ಅಕ್ಕನ ಮಗ ಎಂಬ ಕಾರಣದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 67 ದಾಖಲೆ ನಾವು ಸೃಷ್ಠಿ ಮಾಡಿರುಂತಹ ದಾಖಲೆಯಾಗಿರುತ್ತದೆ ಎಂದರೆ ಸುಳ್ಳು. ನನ್ನ ಮುಖ್ಯ

ವಿಚಾರಣೆಯಲ್ಲಿ ತಿಳಿಸಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯವರು 4ನೇ ವಾದಿಯವರಿಗೆ ನಿಪಿ 67 ಅಥವಾ ಬೇರೆ ಯಾವುದೇ ದಾಖಲೆಯನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸುಳ್ಳು. 2ನೇ ಪ್ರತಿವಾದಿಯವರ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1ನೇ ವಾದಿಯವರಿಗೆ 2 ಲಕ್ಷ ರೂ.ಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸುಳ್ಳು. ಅದೇ ರೀತಿ ಸಾಧುಲಿಯವರು 8 ಲಕ್ಷ ರೂ.ಗಳನ್ನು 4ನೇ ವಾದಿಯವರಿಗೆ ಕೊಟ್ಟಿರುವುದಿಲ್ಲ ಎಂದರೆ ಸುಳ್ಳು. ನನ್ನ ಪ್ರಮಾಣ ಪತ್ರವನ್ನು 4ನೇ ವಾದಿಯವರು ಹೇಳಿ ಬರೆಸಿದ ನಂತರದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸುಳ್ಳು.

**<u>ಮರು ವಿಚಾರಣೆಃ</u> ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.